ಶ್ರೀ ಬಿ. ರಾಚಯ್ಯ.—ಈಗ ನಾವು ಅವರಿಗೆ ಏನು ಕಾಂಪನ್‌ಸೇಷನ್ ಕೊಡಬೇಕೆಂದು ಗೊತ್ತು ಮಾಡಿದ್ದೇವೋ ಅದರಮೇಲೆ ಅವರು ಒಪ್ಪಿಕೊಂಡರೆ ಬಹುಶಃ ಇದಕ್ಕಿಂತ ಮುಂದೆ ಹೋಗುವುದಿಲ್ಲ. ಅವರು ಅದನ್ನು ಒಪ್ಪಿಕೊಳ್ಳದೆ ನಮ್ಮನ್ನು ಕೋರ್ಟಿಗೆ ಎಳೆದರೆ ಅಲ್ಲಿ ಅದು ತಡ ಆದರೆ ಅದಕ್ಕೆ ನಾವು ಜವಾಬ್ದಾರರಲ್ಲ.

ಶ್ರೀ ಎಸ್. ಗೋಪಾಲಗೌಡ.—ಗ್ರಾಮಾಧಿಕಾರಿಗಳ ರದ್ದಿನ ವಿಷಯ ನಾನಾ ಕಾರಣಗಳಿಂದ ಅನೇಕ ವರ್ಷಗಳಿಂದ ವಿಳಂಬವಾಗುತ್ತಿದೆ. ಇದರಿಂದ ಪಂಚಾಯತಿಯ ಕೆಲಸಕಾರ್ಯಗಳು ಮತ್ತು ಸರ್ಕಾರದ ರೆಕಾರ್ಡುಗಳನ್ನು ಇಡತಕ್ಕ ಕೆಲಸ ಸಮರ್ಪಕವಾಗಿ ನಡೆಯುತ್ತಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಬಿ. ರಾಚಯ್ಯ.—ಈಗ ಇರತಕ್ಕ ಗ್ರಾಮಾಧಿಕಾರಿಗಳನ್ನು ವಂಶಪಾರಂಪರ್ಯವಾಗಿ ಬಂದಿರತಕ್ಕ ಹಕ್ಕು ಇಲ್ಲದೆ ಇಟ್ಟುಕೊಂಡು ಬರುತ್ತಿದ್ದೇವೆ. ಆದ್ದರಿಂದ ಈಗ ಆ ಕೆಲಸ ನಡೆಯುತ್ತಿದೆ.

ಶ್ರೀ ಅಜೀಜ್‌ಸೇಟ್.—ಈ ಕಾನೂನು 1963ನೇ ಇಸವಿಯಲ್ಲಿ ಜಾರಿಗೆ ಬಂದರೂ ಕೂಡ ಇಲ್ಲಿಯವರೆಗೂ ಅದನ್ನು ಜಾರಿಗೆ ಕೊಡದೆ ಮುಂದುವರಿಸಿಕೊಂಡು ಬಂದಿದ್ದೀರಿ. ಇದನ್ನು ಜಾರಿಗೆ ಕೊಡಬೇಕೆಂದು ಈ ಕಾನೂನನ್ನು ಮಾಡಿದ್ದೀರಾ ಅಥವಾ ಬರೀ ಪುಸ್ತಕದಲ್ಲಿರಲಿ ಎಂದು ಈ ಕಾನೂನು ಮಾಡಿದ್ದೀರಾ ?

ಶ್ರೀ ಬಿ. ರಾಚಯ್ಯ.—ಇದಕ್ಕೆ ನಾನು ಆಗಲೇ ಉತ್ತರ ಹೇಳಿದ್ದೇನೆ. ಬಹುಶಃ ಮಾನ್ಯ ಪದಸ್ಯರಿಗೆ ಕನ್ನಡ ಅರ್ಥವಾಗುತ್ತದೆಯೋ ಇಲ್ಲವೋ ಗೊತ್ತಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಕೋರ್ಟಿಗೆ ಹೋಗಿ ತಡೆ ಆಜ್ಞೆ ಆದ ಪ್ರಕರಣಗಳನ್ನು ಬಿಟ್ಟು ಉಳಿದ ಎಲ್ಲಾ ಪ್ರಕರಣಗಳನ್ನೂ ಸಾರ್ವತ್ರಿಕವಾಗಿ ಬಗೆಹರಿಸುವುದಕ್ಕೆ ಏತಕ್ಕೆ ಮುಂದಕ್ಕೆ ಹಾಕಬೇಕು ?

ಶ್ರೀ ಬಿ. ರಾಚಯ್ಯ.—ಈಗ ಬೊಂಬಾಯಿ ಕರ್ನಾಟಕದಲ್ಲಿ ಹೆರಿಡಿಟರಿ ಆಫೀಸರುಗಳು ಈ ಕಾನೂನು ಪ್ರಕಾರ ಅಧಿಕಾರವನ್ನು ಉಳ್ಳವರಾಗಿದ್ದಾರೆ. ಈಗ ಇದರಲ್ಲಿ ಒಟ್ಟು 46,138 ಜನ ತೋಟ ತಳವಾರರು ಇದ್ದಾರೆ. 30 637 ಜನ ಪಟೇಲರು ಇದ್ದಾರೆ. ಮತ್ತು 11,737 ಜನ ಶ್ಯಾನುಭೋಗರು ಇದ್ದಾರೆ. ಇದರಲ್ಲಿ ಕೆಲವರನ್ನು ಇಟ್ಟುಕೊಳ್ಳಬೇಕಾಗುತ್ತದೆ. ಹಣವನ್ನು ಪಾವತಿ ಮಾಡತಕ್ಕವರಲ್ಲಿ ಕೆಲವರನ್ನು ಕಡಿಮೆ ಮಾಡಬೇಕು. ಈಗಾಗಲೇ ಶ್ಯಾನುಭೋಗರು ಯಾರು ಯಾರು ತಾಪೇತಿಯನ್ನು ಹೊಂದಿದ್ದಾರೆಯೋ ಅವರುಗಳನ್ನು ತೆಗೆದುಕೊಳ್ಳಬೇಕೆಂದು ನಿರ್ದೇಶನವನ್ನು ಅಧಿಕಾರಿಗಳಿಗೆ ಕೊಟ್ಟಿದ್ದೇವೆ.

———

Outlets in V. C. Area

*Q.—149. Sri G. MADE GOWDA (Kirugavalu).—

Will the Minister for Public Works be pleased to state :—

the total number of authorised and unauthorised outlets in various canals in V. C. Area ?

A.—Sri VEERENDRA PATIL (Minister for Public Works).—

Authorised outlets	...	1,795
Unauthorised outlets	...	401

ಶ್ರೀ ಜಿ. ಮಾದೇಗೌಡ.—ಸ್ವಾಮಿ, ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಅನಧಿಕೃತ ಹೊರಗಂಡಿಗಳು 401 ಎಂದು ಕೊಟ್ಟಿದ್ದೀರಿ, ಅದು ಇನ್ನೂ ಜಾಸ್ತಿ ಇರಬೇಕೆಂದು ನಾನು ತಿಳಿದುಕೊಂಡಿದ್ದೇನೆ. ಈ ರೀತಿ ಅನಧಿಕೃತ ಹೊರಗಂಡಿಗಳನ್ನು ಮಾಡಿಕೊಂಡಿರುವುದರಿಂದ ಟೈರ್ ಎಂಡಿನಲ್ಲಿರತಕ್ಕ ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕುಗಳಲ್ಲಿ ನೀರಿನ ಅಭಾವ ಜಾಸ್ತಿಯಾಗಿದೆ. ಈ ವಿಷಯ ಸರ್ಕಾರಕ್ಕೆ ಗೊತ್ತಿದೆ. ಆದರೂ ಕೂಡ, ಈ ಕಾಡಿಗಳನ್ನು ಮುಚ್ಚುವುದಕ್ಕೆ ಸರ್ಕಾರ

ಪವರು ಕ್ರಮ ತೆಗೆದುಕೊಂಡಿಲ್ಲ. ಇನ್ನುಮೇರಾದರೂ ಅವುಗಳನ್ನು ಮುಚ್ಚಿಸಿ ಕೊನೆಯ ಭಾಗ ಗಳಿಗೆ ನೀರನ್ನು ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅನ್ ಆಥರೈಜ್ಡ್ ಔಟ್‌ಲೆಟ್ಸ್ 401 ಇವೆ ಎಂದು ಉತ್ತರದಲ್ಲಿ ಹೇಳಿದೆ. ಇದಕ್ಕೂ ಹೆಚ್ಚು ಅವು ಇರಬಹುದು ಎಂದು ಮಾನ್ಯ ಸದಸ್ಯರು ಹೇಳುತ್ತಾರೆ. ಇದ್ದರೂ ಇರಬಹುದು. ಹಗಲು ಹೊತ್ತಿನಲ್ಲಿ ಯಾವುದೂ ಇರುವುದಿಲ್ಲ. ಆದರೆ ಮರು ದಿವಸ ಅನಧಿಕೃತ ಔಟ್‌ಲೆಟ್ಸ್ ಪ್ರಾರಂಭವಾಗಿರುತ್ತವೆ. ಇದನ್ನು ತಡೆಗಟ್ಟುವುದಕ್ಕೆ ಜನರು ಸಹಕಾರ ಮಾಡದೇ ಇದ್ದರೆ, ಬಹಳ ಕಷ್ಟ. ಅಲ್ಲಿ ಪೈಪ್ ಒಡೆದು ಹಾಕಿ ನೀರು ಉಪಯೋಗಿಸುವ ಮನೋಭಾವ ರೈತರಲ್ಲಿ ಬೆಳೆಯುತ್ತಿದೆ. ಇದರ ಮೂಲಕ ಟೇರ್ ಎಂಡ್‌ನಲ್ಲಿರುವವರಿಗೆ ನೀರು ಇಲ್ಲದೆ ಕಷ್ಟ ವಾಗುತ್ತದೆ. ಇದಕ್ಕಾಗಿ 24 ಗಂಟೆ ಕಾಯುವುದಕ್ಕಾಗುವುದಿಲ್ಲ. ಪೋಲಿಸರನ್ನು ಇಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದುದರಿಂದ ಜನರು ಸಹಕಾರ ಮಾಡದೇ ಇದ್ದರೆ, ಈ ಪ್ರಶ್ನೆ ಹೇಗೆ ಬಗೆ ಹರಿಸಬೇಕು ಎಂಬುದು ಗೊತ್ತಾಗುವುದಿಲ್ಲ.

ಶ್ರೀ ಜಿ. ಮಾದೇಗೌಡ.—ಅನ್ ಆಥರೈಜ್ಡ್ ಔಟ್‌ಲೆಟ್ಸ್ ಬಗ್ಗೆ ಕಾನೂನು ಬದ್ಧವಾಗಿ ಕ್ರಮ ತೆಗೆದುಕೊಂಡು ಕೋರ್ಟ್‌ನಲ್ಲಿ ಕೇಸು ಹಾಕಿ ಯಾವುವಾದರೂ ಒಂದು ಕ್ರಮ ತೆಗೆದುಕೊಂಡು ಈಗ ಅಗಿರತಕ್ಕಂಥಾದ್ದನ್ನು ಮುಚ್ಚಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತಾ ಇದ್ದೇವೆ. ಆದರೆ ನಾವ್ಯಾರು ಕಡೆ ಒಮ್ಮಿಂದೊಮ್ಮೆಲೇ ಔಟ್‌ಲೆಟ್ಸ್ ಪ್ರಾರಂಭವಾಗುತ್ತವೆ. ಎಂಜಿನಿಯರ್ಸ್ ಅವರು ಹೇಳುವುದಕ್ಕೆ ಹೋದರೆ ಅವರನ್ನು ಹೊಡೆಯುವುದಕ್ಕೆ ಜನ ಬರುತ್ತಾರೆ. ಇನ್ನು ಮುಂದೆ ಅಲ್ಲಿಗೆ ಎಂಜಿನಿಯರ್‌ಗಳು ಹೋಗುವುದಾದರೆ ಹಿಂದೆ ಮುಂದೆ ಆರ್ಮ್ಡ್ ರಿಜರ್ವ್ ಪೋಲಿಸ್ ತೆಗೆದುಕೊಂಡು ಹೋಗಜೇಕಾಗುತ್ತದೆ. ಆದುದರಿಂದ ಅಲ್ಲಿಯ ಜನ ಸಹಕಾರ ಮಾಡಿದರೆ ಕ್ರಮ ತೆಗೆದುಕೊಳ್ಳಲು ಅನುಕೂಲವಾಗುತ್ತದೆ.

Mr. SPEAKER.—Question Hour is over.

QUESTION FOR ANSWER ON THE DAY

(but not taken up)

Village Electrification in Muddebihal Taluk

*Q.—218. **Sri S. M. GURADDI** (Muddebihal).—

Will the Minister for Public Works be pleased to state :—

(*a*) the names of villages in Muddebihal Taluk to which Electricity would be supplied by M.S.E.B. during 1967-68 ;

(*b*) the number of wells for which power would be supplied ?

A.—**Sri VEERENDRA PATIL** (Minister for Public Works).—

(*a*) 1. Muddebihal
2. Natalwad
3. Kuntogi
4. Davalgi
5. Mileswar
6. Bommanahalli
7. Hollur.

(*b*) 50.